**ದಿನಾಂಕಃ 07.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಸಿ.ಎಸ್ ವಕೀಲರಿಂದಃ**

ನಾನು 10ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಪೂರ್ಣವಾಗಿ ಓದಲು ಮತ್ತು ಬರೆಯಲು ಬರುತ್ತದೆ, ಆದರೆ ಆಂಗ್ಲ ಭಾಷೆ ಸ್ವಲ್ಪ ಸ್ವಲ್ಪ ಬರುತ್ತದೆ. ನಾನು ಸಲ್ಲಿಸಿರುವ ಫಿರ್ಯಾಧಿಯು ಆಂಗ್ಲ ಭಾಷೆಯಲ್ಲಿದೆ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಸಲ್ಲಿಸಿರುವ ಫಿರ್ಯಾಧಿಯಲ್ಲಿ ನಮೂದಿಸಿರುವ ವಿಚಾರಗಳು ನನಗೆ ತಿಳಿದಿರುತ್ತವೆ. ನಾನು ಟೈಲರ್ ಕೆಲಸ ಮಾಡುತ್ತೇನೆ. ನಾನು ಸದರಿ ಟೈಲರಿಂಗ್ ಕೆಲಸವನ್ನು ಸುಮಾರು 20 ವರ್ಷಗಳಿಂದ ಮಾಡುತ್ತಿದ್ದೇನೆ. ಸದರಿ ಟೈಲರಿಂಗ್ ಕೆಲಸವನ್ನು ಮಾಡಲು ನನ್ನ ಯಾವುದೇ ಪರವಾನಿಗೆ ಪಡೆದುಕೊಂಡಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ನಾನು ಮನೆಯಲ್ಲಿಯೇ ಟೈಲರಿಂಗ್ ಕೆಲಸ ಮಾಡುತ್ತೇನೆ ಎಂದು ನುಡಿಯುತ್ತಾರೆ.

ಸದರಿ ಟೈಲರಿಂಗ್ ಕೆಲಸದಿಂದ ಮಾಸಿಕವಾಗಿ ನನಗೆ ಅಂದಾಜು ರೂ.15,000/- ಆದಾಯ ಬರುತ್ತದೆ. ಸಾಕ್ಷಿದಾರರು ಮುಂದುವರೆದು ಮದುವೆಯ ಸೀಜನ್ ನಲ್ಲಿ ನನಗೆ ತಿಂಗಳಿಗೆ ರೂ. 30,000/- ವರೆಗೂ ಆದಾಯ ಬರುತ್ತದೆ ಎಂದು ನುಡಿಯುತ್ತಾರೆ. ನಾನು ಗ್ರಾಹಕರು ನೀಡಿದ್ದ ಬಟ್ಟೆಯನ್ನು ಪಡೆದು ಹೊಲೆದು ನೀಡಿದ್ದಾಗ ಗ್ರಾಹಕರಿಗೆ ರಸೀದಿಯನ್ನು ನೀಡುವುದಿಲ್ಲ. ಸಾಮಾನ್ಯವಾಗಿ ಟೈಲರ್ ಗಳು ಬಟ್ಟೆಗಳನ್ನು ಪಡೆದುಕೊಂಡಾಗ ಗ್ರಾಹಕರಿಗೆ ರಸೀದಿಯನ್ನು ನೀಡುತ್ತಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಅಂಗಡಿಗಳನ್ನು ಇಟ್ಟುಕೊಂಡಿರುವ ಟೈಲರ್ ಗಳು ರಸೀದಿಯನ್ನು ನೀಡುತ್ತಾರೆ, ಆದರೆ ನಾನು ಮನೆಯಲ್ಲಿ ಬಟ್ಟೆ ಹೊಲೆಯುವುದರಿಂದ ಯಾವುದೇ ರಸೀದಿ ನೀಡುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಗಂಡ ವ್ಯವಸಾಯ ಮಾಡುತ್ತಾರೆ. ನಮಗೆ 4 ಎಕರೆ ಸ್ವಂತ ಜಮೀನು ಇರುತ್ತದೆ ಮತ್ತು ನಾವು ಬೇರೆಯವರಿಂದ 2 ಎಕರೆ ಜಮೀನನ್ನು ಪಡೆದುಕೊಂಡು ಗುತ್ತಿಗೆಗೆ ವ್ಯವಸಾಯ ಮಾಡುತ್ತೇವೆ. ಸದರಿ ಜಮೀನು ಇರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನನ್ನ ಗಂಡ ಬೇರೆಯವರ ಜಮೀನನ್ನು ಗುತ್ತಿಗೆಗೆ ಪಡೆದುಕೊಂಡು ವ್ಯವಸಾಯ ಮಾಡುತ್ತಿರುವ ಬಗ್ಗೆ

ದಾಖಲಾತಿಗಳು ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಮನೆಯಲ್ಲಿ ನಾನು, ನನ್ನ ಗಂಡ ಮತ್ತು ಇಬ್ಬರು ಮಕ್ಕಳು ಇರುತ್ತೇವೆ. ಸದರಿ ಮಕ್ಕಳಲ್ಲಿ ನನ್ನ ಮಗಳಿಗೆ 20 ವರ್ಷ ವಯಸ್ಸು ಮತ್ತು ಮಗನಿಗೆ 22 ವರ್ಷ ವಯಸ್ಸಾಗಿರುತ್ತದೆ. ಸದರಿ ಮಕ್ಕಳಲ್ಲಿ ನನ್ನ 22 ವರ್ಷದ ಮಗನಿಗೆ ಬುದ್ದಿಮಾಂದ್ಯವಾಗಿ ಮನೆಯಲ್ಲಿಯೇ ಇರುತ್ತಾನೆ. ನನ್ನ ಮಗಳು ಈಗ ಅಂತಿಮ ಬಿಕಾಂ ಪದವಿಯಲ್ಲಿ ವಿಧ್ಯಾಭ್ಯಾಸ ಮಾಡುತ್ತಿದ್ದಾರೆ. ನನ್ನ ಮಗಳು ಮೈಸೂರಿನ ಟೆರೆಷಿಯನ್ ಕಾಲೇಜಿನಲ್ಲಿ ವಿಧ್ಯಾಭ್ಯಾಸ ಮಾಡುತ್ತಿದ್ದಾಳೆ. ನನ್ನ ಮಗಳ ವಿಧ್ಯಾಭ್ಯಾಸಕ್ಕಾಗಿ ವರ್ಷಕ್ಕೆ ಸುಮಾರು 45,000 ರಿಂದ 50,000 ಖರ್ಚಾಗುತ್ತದೆ. ನನ್ನ ಮಗಳ ಬಸ್ಸಿನ ಖರ್ಚು ಮತ್ತು ಇತರ ಖರ್ಚಿಗಾಗಿ ವಾರ್ಷಿಕವಾಗಿ ಸುಮಾರು 10,000/- ಖರ್ಚಾಗುತ್ತದೆ. ನನ್ನ ಬುದ್ದಿಮಾಂದ್ಯ ಮಗನ ಆರೋಗ್ಯ ತಪಾಸಣೆಗಾಗಿ ನಾವು ಯಾವುದೇ ಹಣ ಖರ್ಚು ಮಾಡುವುದಿಲ್ಲ. ನಮ್ಮ ಮನೆಯ ಇತರೆ ಖರ್ಚುಗಳನ್ನು ಸಹ ನಾವು ಮೇಲ್ಕಂಡ ಆದಾಯದಲ್ಲಿಯೇ ಭರಿಸುತ್ತೇವೆ.

ನಾನು ಯಾವುದೇ ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ಅದೇ ರೀತಿ ನನ್ನ ಗಂಡನು ಸಹ ಯಾವುದೇ ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ಆರೋಪಿಯು ನನಗೆ ಸುಮಾರು 9 ವರ್ಷಗಳಿಂದ ಪರಿಚಿತರು. ಆರೋಪಿಯು ಆತನ ಹೆಂಡತಿಯಾದ ಮೀನಾರವರಿಂದ ನನಗೆ ಪರಿಚಿತರು. ಆರೋಪಿಯ ಹೆಂಡತಿ ಮತ್ತು ನಾನು ಹಲವಾರು ಸಂಘದ ಸದಸ್ಯರು ಎಂದರೆ ಸರಿ. ಆರೋಪಿಯು ಬಿಬಿ ಫ್ಯಾಷನ್ ಎಂಬ ಹೆಸರಿನಲ್ಲಿ ವಿದ್ಯಾನಗರದಲ್ಲಿ ಬಟ್ಟೆ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು. ಆರೋಪಿಯ ಮನೆಯಲ್ಲಿ ಆರೋಪಿ, ಆತನ ಹೆಂಡತಿ, ಆತನ ಮಕ್ಕಳು, ಆತನ ತಾಯಿ ಮತ್ತು ಆತನ ತಾಯಿಯ ಚಿಕ್ಕಮ್ಮ ವಾಸಿಸುತ್ತಿದ್ದಾರೆ. ಆರೋಪಿಯು ಆರ್ಥಿಕವಾಗಿ ಪ್ರಬಲವಾಗಿದ್ದಾರೆ ಎಂದರೆ ಸರಿ. ಆರೋಪಿ ಮತ್ತು ಆರೋಪಿಯ ಹೆಂಡತಿಯು 2023ರ ಪೆಬ್ರವರಿ ಮತ್ತು ಮಾರ್ಚ ತಿಂಗಳುಗಳಲ್ಲಿ ಹಲವಾರು ಬಾರಿ ದೂರವಾಣಿ ಕರೆ ಮಾಡಿ ಹಣವನ್ನು ಸಾಲವಾಗಿ ನೀಡುವಂತೆ ಕೇಳುತ್ತಿದ್ದರು. ಆರೋಪಿಯು ತಾವು ಬ್ಯಾಂಕಿನಿಂದ ಪಡೆದುಕೊಂಡಿದ್ದ ಸಾಲವನ್ನು ಮರುಪಾವತಿಸಲು ಹಣ ಬೇಕಾಗಿದ್ದರಿಂದ ನನ್ನ ಬಳಿ ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತಾರೆ. ಆರೋಪಿಯು ನನ್ನ ಬಳಿ ರೂ.15,00,000/- ಹಣವನ್ನು ಸಾಲವಾಗಿ ಕೇಳಿದ್ದರು, ಆದರೆ ನಾನು ರೂ.10,00,000/- ಹಣವನ್ನು ಆರೋಪಿಗೆ ಸಾಲವಾಗಿ

ನೀಡಿದ್ದೆನು. ಸದರಿ ಸಮಯದಲ್ಲಿ ಆರೋಪಿಯು ಸದರಿ ರೂ.10,00,000/- ಹಣಕ್ಕೆ ಮಾಸಿಕವಾಗಿ ಶೇಕಡಾ 2 ರಂತೆ ಬಡ್ಡಿ ನೀಡುತ್ತೇನೆ ಎಂದು ಒಪ್ಪಿಕೊಂಡಿದ್ದರು.

ದಿನಾಂಕ 27.04.2023 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ನಾನು ಆರೋಪಿಗೆ ರೂ.10,00,000/- ಹಣವನ್ನು ಸಾಲವಾಗಿ ನಮ್ಮ ಮನೆಯಲ್ಲಿ ನೀಡಿರುತ್ತೇನೆ. ನಾನು ಆರೋಪಿಗೆ ಹಣವನ್ನು ಸಾಲವಾಗಿ ನೀಡುವಾಗ ನಮ್ಮ ಮನೆಯಲ್ಲಿ ನಾನು, ನನ್ನ ಗಂಡ, ಆರೋಪಿ ಮತ್ತು ಆರೋಪಿಯ ಹೆಂಡತಿ ಮಾತ್ರ ಹಾಜರಿದ್ದೆವು. ನಾನು ಸದರಿ ರೂ.10,00,000/- ಹಣವನ್ನು ಎಷ್ಟು ಮುಖಬೆಲೆಯ ಹಣದಲ್ಲಿ ನೀಡಿದ್ದೆನು ಎಂದು ನನಗೆ ನೆನಪಿಲ್ಲ. ಸದರಿ ರೂ.10,00,000/- ಹಣವನ್ನು ನಾನು ನನ್ನ ಚಿನ್ನದ ಒಡವೆಗಳನ್ನು ಕೆನರಾ ಬ್ಯಾಂಕ್, ತಿ.ನರಸೀಪುರ ಶಾಖೆಯಲ್ಲಿ ಅಡಮಾನ ಮಾಡಿ ಸಾಲ ಪಡೆದುಕೊಂಡಿದ್ದೆನು.

**ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ.